ಮೂರು ದಿನಗಳಿಗೆ ಲೆಕ್ಕ ಹಾಕಿ ಒಟ್ಟು ಮೊತ್ತವನ್ನು ಕೈದಿಯ ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಟ್ಟನು. ಪ್ರವಾದಿಯು ಕೂಡಲೇ ವರ್ಗಾಯಿಸಲ್ಪಟ್ಟ ಆಯಸ್ಸಿನ ಅವಧಿಯಲ್ಲಿ ಒಟ್ಟು ಎಂಟು ಅಧಿಕ ವರ್ಷಗಳು ಬರುವುದರಿಂದ ಎಂಟು ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಹಾಕಲು ತಿಳಿಸಿದ. ಏಕೆಂದರೆ ಶ್ರೀಮಂತನು ದಾನಿಗೆ ಕೊಡುವಷ್ಟೇ ಹಣವನ್ನು ಪ್ರವಾದಿಗೂ ಕೊಡಬೇಕೆಂದು ಮೊದಲೇ ಒಪ್ಪಂದವಾಗಿತ್ತು. ಈ ವಹಿವಾಟಿನಲ್ಲಿ ದಾನಿ ಮತ್ತು ಪ್ರವಾದಿ ಸರ್ಕಾರಕ್ಕೆ ಕೊಡಬೇಕಾದ ಆದಾಯ ತೆರಿಗೆಯನ್ನು ಶ್ರೀಮಂತನೇ ಕೊಡಬೇಕಾಗಿತ್ತು. ಎಲ್ಲದಕ್ಕೂ ಶ್ರೀಮಂತನು ಸಂತೋಷದಿಂದಲೇ ಒಪ್ಪಿಕೊಂಡ. ಹೆಚ್ಚುತ್ತಿರುವ ತನ್ನ ಆಯಸ್ಸಿನಲ್ಲಿ ತಾನು ಗಳಿಸಬಹುದಾದ ಲಕ್ಷಾಂತರ ಕೋಟಿ ಹಣದ ಮುಂದೆ ದಾನಿಗೆ ಮತ್ತು ಪ್ರವಾದಿಗೆ ಕೊಡುವ ಹಣ ಜುಜುಬಿ ಎಂದು ಅವನಿಗೆ ಗೊತ್ತಿತ್ತು.

ಕೈದಿಯನ್ನು ಜೈಲಿನಿಂದ ಹೊರಗೆ ಕಳುಹಿಸುವಂತಿರಲಿಲ್ಲ. ಆದುದರಿಂದ ಪ್ರವಾದಿಯೇ ಜೈಲಿಗೆ ಬರುವಂತಾಯಿತು. ಪ್ರವಾದಿಯು ಜೈಲಿನ ದೊಡ್ಡ ಹಾಲಿನಲ್ಲಿ ನೂರಾರು ಕೈದಿಗಳ ಸಮ್ಮುಖದಲ್ಲಿ ಕೈಯಲ್ಲಿ ಹಿಡಿದ ಚಿನ್ನದ ಮಾಯಾದಂಡವನ್ನು ಕತ್ತಿಯಂತೆ ಗಾಳಿಯಲ್ಲಿ ಜೋರಾಗಿ ಝಳಪಿಸುತ್ತ ಬಾಯಲ್ಲಿ ಅರ್ಥವಾಗದ ಮತ್ತು ಎಂದೂ ಎಲ್ಲೂ ಕೇಳದಂಥ ಭಾಷೆಯಲ್ಲಿ ಮಂತ್ರ ಹೇಳುತ್ತ ದಾನಿಯನ್ನು ಮತ್ತು ಸ್ವೀಕರಿಸುವವನನ್ನು ಅಕ್ಕಪಕ್ಕದಲ್ಲಿ ಕುಳ್ಳಿರಿಸಿ ತನ್ನ ದಿವ್ಯ ಶಕ್ತಿಯಿಂದ ಆಯಸ್ಸು ವರ್ಗಾವಣಾ ಪ್ರಕ್ರಿಯೆಯನ್ನು ಪೂರೈಸಿದ. ಕೀಮೋಥೆರಪಿಯಲ್ಲಿದ್ದ ಶ್ರೀಮಂತನು ಅಂದು ಎಷ್ಟು ಗೆಲುವಾಗಿದ್ದನೆಂದರೆ ಟಿವಿಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಪತ್ರಿಕೆಗಳಲ್ಲಿ ಅವನ ಮುಖವೇ ರಾರಾಜಿಸುತ್ತಿತ್ತು. ಪಾಪ ಕೈದಿಯು ತನ್ನ ಬಲವೇ ಉಡುಗಿದಂತೆ, ಓಡಾಡಲು ನಿಲ್ಲಲು ಕೂರಲೂ ಆಗದಂತೆ ಬಸವಳಿದು ಹೋಗಿದ್ದ. ಯಾಕೆಂದರೆ ಇನ್ನೆರಡು ದಿನದಲ್ಲಿ ಅವನು ಗಲ್ಲಿಗೇರಲಿದ್ದ. ಸಾವಿನ ಭಯ ಮತ್ತು ದುಃಖಗಳು ಅವನನ್ನು ಹಿಂಡಿ ಹಿಪ್ಪೆ ಮಾಡಿದ್ದವು.

ಶ್ರೀಮಂತನು ದಿನದಿಂದ ದಿನಕ್ಕೆ ಶಕ್ತಿ ವರ್ಧಿಸಿಕೊಂಡು ಮತ್ತೆ ಯುವಕನಂತಾಗಿರುವುದನ್ನು ಸಮೂಹ ಮಾಧ್ಯಮಗಳು ನಿರಂತರ ಬಿತ್ತರಿಸಿದವು. ಮಾಧ್ಯಮದವರು ಈಗಾಗಲೇ ಪ್ರವಾದಿಯಿಂದ ಸಾಕಷ್ಟು ಹಣ ಪಡೆದಿದ್ದು ಪ್ರವಾದಿಯವರ ಪರವಾಗಿ ಬ್ಯಾಟಿಂಗ್ ಮಾಡುತ್ತಿದ್ದರು. ಶ್ರೀಮಂತನನ್ನು ಭೇಟಿಯಾಗದೆಯೇ ಅನೇಕ ಸಂದರ್ಶನಗಳು ಪ್ರಕಟವಾದವು. ಮನುಷ್ಯ ಸಾವನ್ನು ಗೆದ್ದೇ ಬಿಟ್ಟನೆಂದು ಡಂಗೂರ ಹೊಡೆಯಲಾಯಿತು. ವಿಜ್ಞಾನಕ್ಕೆ ಆಗದೇ ಇದ್ದದ್ದು ಮಂತ್ರಕ್ಕೆ ಆಯಿತೆಂದು ನಗರದ ಆಸ್ತಿಕರು ಮತ್ತಷ್ಟು ಮಂತ್ರಗಳನ್ನು ಗಟ್ಟು ಮಾಡಿ ಜೋರಾಗಿ ಹೇಳುತ್ತ ಪ್ರಾರ್ಥನೆ ಮಾಡತೊಡಗಿದರು. ಪ್ರವಾದಿಯ ಪ್ರಚಾರ ತಾರಕಕ್ಕೇರಿತು. ಈ ಅಮೋಘ ಸಂಗತಿಯನ್ನು ನಗರವು ನೋಡುತ್ತ ಮೈಮರೆತು ತನ್ನೆಲ್ಲ ಇತರೆ ಕಾರ್ಯಗಳ ಬದಿಗೊತ್ತಿತು. ಮಾನವ ಚಂದ್ರಲೋಕದ ಮೇಲೆ ಕಾಲಿಟ್ಟ ದಿನವಾಗಲೀ ಅಥವಾ ಭೂ ಗ್ರಹದಿಂದಲೇ ದೂರವಾಗಿ ಬಾಹ್ಯಾಕಾಶದಲ್ಲಿದ್ದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್‌ಮೋರ್ ಒಂಬತ್ತು ತಿಂಗಳ ನಂತರ ಪವಾಡ ಸದೃಶವಾಗಿ ಭೂಮಿಗೆ ಹಿಂತಿರುಗಿದ ದಿನವಾಗಲೀ ಭೂ ಗ್ರಹ ಅಷ್ಟು ಸಂಭ್ರಮಪಟ್ಟಿರಲಿಲ್ಲ.

ಪ್ರವಾದಿಯ ಪವಾಡವೇನೋ ಸರಿ, ಆದರೆ ಆಯಸ್ಸು ಬಹಳ ತುಟ್ಟಿಯಾಯಿತೆಂದು ಭಾವಿಸಿದ ಸಾಧಾರಣ ಶ್ರೀಮಂತರು ಮತ್ತು ಜನಸಾಮಾನ್ಯರು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ನುಗ್ಗಿದರು. ಅಲ್ಲಿ ತಮ್ಮ ಹೃದಯ, ಕಿಡ್ನಿ, ಲಿವರ್, ಮೆದುಳು, ಥೈರಾಯಿಡ್, ಕರುಳು ಮುಂತಾಗಿ ವಿವಿಧ ಅಂಗಗಳ ಕಾರ್ಯಕ್ಷಮತೆ ಪರೀಕ್ಷಿಸಿ ತಮ್ಮ ಕರಾರುವಾಕ್ಕು ಆಯಸ್ಸು ತಿಳಿಸಿರೆಂದು ವೈದ್ಯರಿಗೆ ದುಂಬಾಲು ಬಿದ್ದರು. ವೈದ್ಯರು ಸಾವಿರಾರು ಜನರನ್ನು ಕಂಡದ್ದೇ ಅವರ ಉಗುರು, ಕೂದಲು, ಚರ್ಮದಿಂದ ಹಿಡಿದು ಸರ್ವ ಅಂಗಗಳ ಅಸಂಖ್ಯಾತ ಪರೀಕ್ಷೆಗಳನ್ನು ನಡೆಸಿದರು. ಒಂದಕ್ಕೆ ನಾಲ್ಕರಷ್ಟು ಸುಲಿದರು. ಆದರೆ ಯಾರ ಆಯಸ್ಸಿನ ಬಗ್ಗೆಯೂ ಅಂದಾಜು ಮಾಡಿ ಹೇಳಲಿಲ್ಲ. 'ನಾನು ನಿಮ್ಮ ಥರ ನರಮನುಷ್ಯನೇ ಕಣ್ರೀ. ಅಂಗಗಳು ಸರಿಯಾಗಿಯೇ ಇರುತ್ತವೆ. ಆದರೆ ಯಾವಾಗ ಮತ್ತು ಏಕೆ ಕೈಕೊಡುತ್ತವೆ ಎಂದು ಹೇಳಲು ಬರುವುದಿಲ್ಲ. ಮೊನ್ನೆ ಏನಾಯ್ತು ನೋಡಿ! ಆರೋಗ್ಯ ಉಕ್ಕುತ್ತಿದ್ದ ಜೀನಿಯಸ್ ಪಿಚ್ ಮೇಲೇ ಬಿದ್ದು ಗೊಟಕ್ ಅನ್ನಲಿಲ್ಲವೆ? ಈ ಜಗತ್ತಿನಲ್ಲಿ ಮನುಷ್ಯನ ಜ್ಞಾನ ಮೀರಿದ್ದು ಏನೋ ಇದೆ. ರಿಸ್ಕ್